**ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ,**
**ಸಕಲೇಶಪುರ**
**C.C.No.205/2025**

| | | |
|---|---|---|
| **ಹೆಸರುಃ** | **ವಿಕ್ಯಾತ್** | **CW-1** |
| **ತಂದೆ/ಗಂಡ ಹೆಸರುಃ** | **ಮಲ್ಲಿಕಾರ್ಜುನ ಸ್ವಾಮಿ** | **PW-1** |
| **ವಯಸ್ಸುಃ** | **36 ವರ್ಷ** | |
| **ವೃತ್ತಿಃ** | **ವ್ಯವಸಾಯ** | |
| **ವಿಳಾಸಃ** | **ದುಗ್ಗಟ್ಟಿ ಗ್ರಾಮ, ಯಳಂದೂರು ಗ್ರಾಮ,** | **ದಿನಾಂಕಃ 07-04-2026** |

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ಯವರಿಂದ.**

ಚಾಸಾ 5 ನನ್ನ ತಾಯಿ ಇರುತ್ತಾರೆ. ದಿಃ 26.01.2025 ರಂದು ನಾನು ಸಕಲೇಪುಶಪುರ ತಾಲೂಕು ಬೆಳಗೋಡು ಹೋಬಳಿ, ಹೊಸಗದ್ದೆ ಗ್ರಾಮದ ಸ ನಂ 83/1ರಲ್ಲಿ ತೋಟದ ಕೆಲಸ ಮಾಡಿಸುತ್ತಿದ್ದಾಗ, ಆರೋಪಿ ಒಂದು ಬ್ಯಾಗ್ ನಲ್ಲಿ ಕಾರದ ಪುಡಿ ತಂದು ನನ್ನ ಮುಖಕ್ಕೆ ಎರಚಿ ಮಚಿ ನಿಂದ ನನ್ನನ್ನು ಹಲ್ಲೆ ಮಾಡಿರುತ್ತಾರೆ. ಆ ಸಮಯದಲ್ಲಿ ಪಕ್ಕದ ತೋಟದವರು ಚಾಸಾ 3 ರವರು ಬಂದು ಜಗಳ ಬಿಡಿಸಿರುತ್ತಾರೆ. ನಂತರ ನಾನು 112 ಪೊಲೀಸರಿಗೆ ಕರೆ ಮಾಡಿ ಕರೆಸಿರುತ್ತೇನೆ. ಆರೋಪಿಯನ್ನು ಪೊಲೀಸರು ಕರೆದುಕೊಂಡು ಹೋಗಿರುತ್ತಾರೆ. ಊರಿನವರ ಜೊತೆ ಮಾತಾನಾಡಿದಾಗ, ಆರೋಪಿ ಪಂಚಾಯಿತಿಗೆ ಬಾರದ ಕಾರಣ ಮರುದಿನ ನಾನು ಠಾಣೆಯಲ್ಲಿ ದೂರು ನೀಡಿರುತ್ತೇನೆ. ಸಾಕ್ಷಿಯು ದೂರಿನಲ್ಲಿ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ದೂರನ್ನು ನಿಪಿ 1 ಎಂದು, ಸಹಿಯನ್ನು ನಿ ಪಿ 1 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಘಟನಾ ಸ್ದಳದ ಪಂಚನಾಮೆಯಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿ ಪಿ 2 ಎಂದು, ಸಹಿಯನ್ನು ನಿ ಪಿ 2 ಎ ಎಂದು ಗುರುತಿಸಲಾಯಿತು. ದಿಃ 27.01.2025 ರಂದು ಪೊಲೀಸರು ಸಂಜೆ 6.30 ಕ್ಕೆ ಘಟನಾ ಸ್ದಳಕ್ಕೆ ಬಂದು ಪಂಚನಾಮೆ

ಮಾಡಿರುತ್ತಾರೆ. ನಾನು ಸಹಿ ಮಾಡಿರುತ್ತೇನೆ. ಪಂಚನಾಮೆ ಕಾಲಕ್ಕೆ ಚಾಸಾ 3 ಮತ್ತು 4 ರವರು ಇದ್ದರು. ಆ ಸಮಯದಲ್ಲಿ ಪೋಟೋ ತೆಗೆದಿರುತ್ತಾರೆ. ಸಾಕ್ಷಿಯು ಪೋಟೋವನ್ನು ನೋಡಿ ಗುರುತಿಸಿರುತ್ತಾರೆ. ನಾನು ಪೊಲೀಸರಿಗೆ ಮರು ಹೇಳಿಕೆ ನೀಡಿರುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ ಸ ಅ ಅವರು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ ಮಾನ್ಯ ಎ ಪಿ ಪಿ ಯವರಿಂದ.**

ಸ ನಂ *83/1 , 12* ಎಕರೆ *10* ಗುಂಟೆ ನನ್ನ ತಾಯಿ ಚಾಸಾ *5* ರವರ ಹೆಸರಿನಲ್ಲಿ ಇದೆ ಎಂದರೆ ಸರಿ. ಸದರಿ ಜಮೀನಿನ ಸಲುವಾಗಿ ಆರೋಪಿ ಪದೇ ಪದೇ ಗಲಾಟೆ ಮಾಡುತ್ತಿದ್ದರು ಎಂದರೆ ಸರಿ. ದಿಃ *26.01.2025* ರಂದು ಬೆ *11.30* ಕ್ಕೆ ನಾನು ಕಾಫಿ ತೋಟ ಮಾಡಿಸುತ್ತಿದ್ದಾಗ ಆರೋಪಿ ಜಮೀನಿಗೆ ಅತಿಕ್ರಮ ಪ್ರವೇಶ ಮಾಡಿರುತ್ತಾರೆಂದರೆ ಸರಿ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಸ್ ಜಿ ವಕೀಲರಿಂದಃ**

ಆರೋಪಿ ನನಗೆ ಸುಮಾರು *6* ವರ್ಷಗಳಿಂದ ಪರಿಚಯವಿರುತ್ತಾರೆ. ನಿ ಪಿ *1* ದೂರನ್ನು ನಾನೇ ಬರೆದಿರುತ್ತೇನೆ. ಅದನ್ನು ನನ್ನ ಲ್ಯಾಪಟಾಪ್ ನಿಂದ ಟೈಪ್ ಮಾಡಿ ಎ ಸಿ ಕಚೇರಿಯ ಬಳಿ ಪ್ರಿಂಟ್ ತೆಗೆದುಕೊಟ್ಟಿರುತ್ತೇನೆ. ಆರೋಪಿಗೆ ನಮ್ಮ ಜಮೀನಿನ ಅಕ್ಕಪಕ್ಕ ಯಾವುದೇ ಜಮೀನು ಇರುವುದಿಲ್ಲ. ಸ ನಂ *83/1* ರ ಪಶ್ಚಿಮ ದಿಕ್ಕಿಗೆ ಸ ನಂ *82* ಇರುತ್ತದೆ. ಅದು ಸರ್ಕಾರಿ ಜಮೀನು ಆಗಿರುತ್ತದೆ. ಸ ನಂ *82* ರಲ್ಲಿ ಭೂರಹಿತರು ಕಾಫಿ ತೋಟ ಮಾಡಿಕೊಂಡು ಬಂದಿರುತ್ತಾರೆಂದರೆ ಸರಿಯಲ್ಲ. ಆರೋಪಿ ನನ್ನ ವಿರುದ್ದ ಪ್ರಕರಣ ದಾಖಲು ಮಾಡಿರುವ ಬಗ್ಗೆ ಗೊತ್ತಿಲ್ಲ. ನನ್ನ ತಾಯಿಯ ಜಮೀನಿಗೆ ಸಂಬಂಧಪಟ್ಟಂತೆ ನಾನೇ ವ್ಯವಹಾರ ಮಾಡುತ್ತೇನೆ. ಆರೋಪಿ ನನ್ನ ತಾಯಿಯ ವಿರುದ್ದ ಸ ನಂ *82* ರ ಸಲುವಾಗಿ ಅಸಲು ದಾವ ನಂಬರ್ *110/2024* ರಂತೆ ದಾವೆ ಹೂಡಿರುತ್ತಾರೆಂದರೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ನನ್ನ ತಾಯಿ ವಕೀಲರ ಮೂಲಕ ಹಾಜರಾಗಿರುತ್ತಾರೆಂದರೆ ಗೊತ್ತಿಲ್ಲ.

ಆರೋಪಿಯ ಹೆಂಡತಿ ಸಹ ನನ್ನ ತಾಯಿಯ ವಿರುದ್ದ ಅಸಲು ದಾವ *290/2024* ರಂತೆ ದಾವೆ ಹೂಡಿರುತ್ತಾರೆಂದರೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ನನ್ನ ತಾಯಿ ವಕೀಲರ ಮೂಲಕ ಹಾಜರಾಗಿರುತ್ತಾರೆಂದರೆ ಗೊತ್ತಿಲ್ಲ. ಸ ನಂ *83/1* ನನ್ನ ತಾಯಿಗೆ ನ್ಯಾಯಾಲಯದ ಡಿಕ್ರಿ ಮೂಲಕ ಬಂದಿರುತ್ತದೆ. ನಾವು ಸದರಿ ಡಿಕ್ರಿಯಲ್ಲಿ ಸ ನಂ *83/1* ರ ಚೆಕ್ಕುಬಂದಿಯಲ್ಲಿ ಸ ನಂ *82* ನ್ನು ಸೇರಿಸಿಕೊಂಡಿರುತ್ತೇವೆಂದರೆ ಸರಿಯಲ್ಲ. ಸ ನಂ *83/1* ರ ಪಶ್ಚಿಮ ದಿಕ್ಕಿಗೆ ಸ ನಂ *82* ನ್ನು ನಮೂದು ಮಾಡಿರುತ್ತೇವೆ. ಸ ನಂ *82* ರ ಪಶ್ಚಿಮ ಭಾಗಕ್ಕೆ ಸ ನಂ *91* ಇದೆ ಎಂದರೆ ಗೊತ್ತಿಲ್ಲ. ಅಕ್ರಮ ಲಾಭ ಹೊಂದುವ ಉದ್ದೇಶದಿಂದ ನ್ಯಾಯಾಲಯದ ಡಿಕ್ರಿ ಪಡೆಯುವ ಸಮಯದಲ್ಲಿ ಸ ನಂ *83* ರ ಪಶ್ಚಿಮ ದಿಕ್ಕಿಗೆ ಸ ನಂ *91* ಎಂದು ನೀಡಿರುತ್ತೇವೆ ಎಂದರೆ ಸಾಕ್ಷಿ ಅದು ಪಶ್ಚಿಮ ದಿಕ್ಕಿಗೆ ಬರುತ್ತದೆ ಎಂದು ನುಡಿಯುತ್ತಾರೆ.

ಸ ನಂ *82* ರಲ್ಲಿ ಆರೋಪಿಯ ಜಮೀನಿನ ಕಾಫಿ ಕುಯ್ಯುಲು ನಾವೇ ತೊಂದರೆ ನೀಡುತ್ತಿದ್ದೇವೆ ಎಂದರೆ ಸರಿಯಲ್ಲ. ಸದರಿ ದಿನ ನಾನು ಜಮೀನಿನಲ್ಲಿ ಕಾಫಿ ಕುಯ್ಯುಸುತ್ತಿದ್ದೆ. ಆ ಸಮಯದಲ್ಲಿ *8-9* ಜನ ಕೆಲಸಗಾರರು ಇದ್ದರು. ಆರೋಪಿ ಜಮೀನಿನ ಬಳಿ ಬಂದು ಕಾರಪುಡಿ ಎರೆಚಿರುತ್ತಾರೆ. ಕೆಲಸ ಮಾಡುತ್ತಿದ್ದ ಜನರಿಗೆ ಆ ಬಗ್ಗೆ ಗೊತ್ತಿರುತ್ತದೆ. ಕೆಲಸ ಮಾಡುತ್ತಿದ್ದ ವ್ಯಕ್ತಿಗಳ ಹೆಸರು ಗೊತ್ತಿಲ್ಲ. ಆರೋಪಿ ಜಮೀನಿನ ಬಳಿ ಬಂದಾಗ ಗಲಾಟೆ ಮಾಡಿರುವುದಿಲ್ಲ. ಆದರೆ ಕಾರಪುಡಿ ನನ್ನ ಮುಖಕ್ಕೆ ಮತ್ತು ತಲೆಯ ಹಿಂಭಾಗಕ್ಕೆ ಎರೆಚಿರುತ್ತಾರೆ. ನನ್ನ ಕಣ್ಣಿಗೆ ಬಿದ್ದು ನನಗೆ ತೊಂದರೆಯಾಗಿರುತ್ತದೆ. ಆರೋಪಿ ನನ್ನನ್ನು ಹೊಡೆದಿರುವುದಿಲ್ಲ. ಆದರೆ ಕತ್ತಿಯಿಂದ ಹಲ್ಲೆ ಮಾಡಲು ಬಂದಿರುತ್ತಾರೆ. ಸ್ಥಳದಲ್ಲಿ ಕಾರದಪುಡಿ ಚೆಲ್ಲಾಡಿತ್ತು.

ಚಾಸಾ *3* ರವರು ನಮ್ಮ ಪಕ್ಕದ ತೋಟದವರು ಇರುತ್ತಾರೆ. ಅವರು ಸ ನಂ *83/2* ಜಮೀನಿನ ಮಾಲೀಕರಾದ ನನ್ನ ತಾಯಿಯ ತಮ್ಮ ಸೂರಜ್ ರವರ ಚಾಲಕರಾಗಿರುತ್ತಾರೆ. ಘಟನಾ ಸ್ಥಳಕ್ಕೂ ಚಾಸಾ *3* ರವರು ಇದ್ದ ಸ್ಥಳಕ್ಕೆ ಸುಮಾರು *50* ಮೀಟರ ಇರುತ್ತದೆ. ಕಾರದಪುಡಿ ಎರೆಚಿದಾಗ ಆರೋಪಿಯನ್ನು ನಾನೇ ಹಿಡಿದುಕೊಂಡಿದ್ದೆ. ನನಗೆ ವಾಹನ ಇರುತ್ತದೆ. ನಾನು ಪೊಲೀಸರಿಗೆ ನನ್ನ ಮೊಬೈಲ್ ನಂಬರ್ *9742020948* ನಿಂದ ಕರೆ ಮಾಡಿರುತ್ತೇನೆ.

ಇಬ್ಬರು ಪೊಲೀಸರು ಸ್ಥಳಕ್ಕೆ ಬಂದಿರುತ್ತಾರೆ. ಆನಂತರ ನಾನು ಪೊಲೀಸರಿಗೆ ಆರೋಪಿಯನ್ನು ಒಪ್ಪಿಸಿರುತ್ತೇನೆ. ನಾನು ಆ ಕೂಡಲೇ ಪೊಲೀಸರಿಗೆ ದೂರು ನೀಡಲು ತೊಂದರೆ ಇರಲಿಲ್ಲ. ನಾನು ಆರೋಪಿ ಮತ್ತು ಅವರ ಹೆಂಡತಿಗೆ ಸೇರಿದ ಸ ನಂ *82* ರಲ್ಲಿ ಕಾಫಿ ಕುಯ್ಯುವ ಉದ್ದೇಶದಿಂದ ಪೊಲೀಸರನು ಕರೆಸಿ ಆರೋಪಿಯನ್ನು ಎರಡು ದಿನಗಳ ಕಾಲ ಠಾಣೆಯಲ್ಲಿ ಇರಿಸಿದ್ದೆ ಎಂದರೆ ಸರಿಯಲ್ಲ. ನಾನು ಆರ್ಥಿಕ ಮತ್ತು ರಾಜಕೀಯ ಪ್ರಭಾವ ಬಳಸಿ ಸರ್ಕಾರಿ ಜಮೀನಿನಲ್ಲಿ ಸ್ವಾಧೀನದಲ್ಲಿ ಇರುವ ಆರೋಪಿಗೆ ತೊಂದರೆ ಕೊಡುತ್ತಾ ಬಂದಿದ್ದೇನೆಂದರೆ ಸರಿಯಲ್ಲ. ಆರೋಪಿ ಅಕ್ರಮ ಸಕ್ರಮ ಅರ್ಜಿ ನೀಡಿದ್ದರೂ ಸಹ ತಹಸೀಲ್ದಾರ ರವರಿಗೆ ಪ್ರಭಾವ ಬಳಸಿ ಅರ್ಜಿ ವಜಾ ಮಾಡಿಸಿರುತ್ತೇನೆಂದರೆ ಸರಿಯಲ್ಲ.

ಆರೋಪಿ ಜಿಲ್ಲಾಧಿಕಾರಿಗೆ ಮೇಲ್ಮನವಿ ಸಲ್ಲಿಸಿ ಪುನರ್ ಪರಿಶೀಲನೆ ಮಾಡುವಂತೆ ತಿಳಿಸಿರುತ್ತಾರೆಂದರೆ ಸರಿಯಲ್ಲ. ಚಾಸಾ *3* ರವರು ನನಗೆ *5-6* ವರ್ಷಗಳಿಂದ ಪರಿಚಯವಿರುತ್ತಾರೆ. ನಿ ಪಿ *1* ರಲ್ಲಿ ಚಾಸಾ *1* ರವರು ಗಲಾಟೆ ಬಿಡಿಸಿರುವುದಾಗಿ ತಿಳಿಸಿರುತ್ತೇನೆ. ನನ್ನ ಪರವಾಗಿ ಮೋಹನ್ ಎಂಬುವವರನ್ನು ಸಾಕ್ಷಿದಾರರಾಗಿ ಮಾಡಿಲ್ಲ. ಚಾಸಾ *3* ರವರು ನನ್ನ ಮಾವನ ಚಾಲಕನಾಗಿದ್ದರಿಂದ ನನ್ನ ಪರವಾಗಿ ಅವರನ್ನು ಉದ್ದೇಶಪೂರಕವಾಗಿ ಸೇರಿಸಿರುತ್ತೇನೆಂದರೆ ಸರಿಯಲ್ಲ. ಪಂಚನಾಮೆಗೆ ಆದಿತ್ಯ ಎಂಬ ಪೊಲೀಸರು ಮತ್ತೊಬ್ಬ ಪೊಲೀಸರು ಬಂದಿದ್ದರು. ಪಂಚನಾಮೆಯಲ್ಲಿ ಕಾರದಪುಡಿ ನಿಶಾನೆ ಇರುವ ಬಗ್ಗೆ ನಮೂದು ಮಾಡಿರುತ್ತಾರೆ. ಪಂಚನಾಮೆಯನ್ನು *6.30* ರಿಂದ *7* ಗಂಟೆಯವರೆಗೆ ಮಾಡಿರುತ್ತಾರೆ. ಪಂಚನಾಮೆಯನ್ನು ಪೊಲೀಸರು ತಯಾರು ಮಾಡಿರುತ್ತಾರೆ. ಆದರೆ ಯಾರೆಂದು ಗೊತ್ತಿಲ್ಲ. ಪಂಚನಾಮೆ ಮಾಡುವಾಗ ಸ್ಥಳದಲ್ಲಿ ವಿಚಾರಣೆ ಮಾಡಿ ಪೋಟೋ ತೆಗೆದುಕೊಂಡರು. ನಂತರ ಪಂಚನಾಮೆ ಎಲ್ಲಿ ಮಾಡಿದ್ದರು ಎಂದು ಗೊತ್ತಿಲ್ಲ. ಪಂಚನಾಮೆಗೆ ಬಂದಾಗ ಆರೋಪಿ ಬಳಸಿದ ಕಾರದಪುಡಿ ಮತ್ತು ಮಚ್ಚನ್ನು ಪೊಲೀಸರಿಗೆ ನೀಡಿರುತ್ತೇನೆ.

ಪಂಚನಾಮೆಗೆ ಸ್ಥಳದಲ್ಲಿ ಬರೆಸಿಕೊಂಡು ಸಹಿ ಪಡೆದಿರುತ್ತಾರೆ. ನಿ ಪಿ *2* ಪಂಚನಾಮೆ ಟೈಪ್ ಮಾಡಿದ್ದು, ಅದನ್ನು ಠಾಣೆಯಲ್ಲಿ ಪ್ರಿಂಟ್ ತೆಗೆದಿರುತ್ತಾರೆ. ಆನಂತರ ನಾನು ಮತ್ತು

ಸಾಕ್ಷಿದಾರರು ಠಾಣೆಯಲ್ಲಿ ಸಹಿ ಮಾಡಿರುತ್ತೇವೆ. ಪೋಟೋವನ್ನು ಖಾಲಿ ಜಾಗದಲ್ಲಿ ತೆಗೆದಿರುತ್ತಾರೆಂದರೆ ಸರಿ. ಅದರ ಹಿಂಭಾಗದಲ್ಲಿ ಬೇಲಿ ಇದೆ ಎಂದರೆ ಸರಿಯಲ್ಲ. ಪೋಟೋವನ್ನು ಸೃಷ್ಠಿ ಮಾಡಿ ತೆಗೆಸಿರುತ್ತೇವೆಂದರೆ ಸರಿಯಲ್ಲ. ದಿಃ *26.01.2025* ರಂದು ಸುಮಾರು *10* ರ ಸಮಯದಲ್ಲಿ ಆರೋಪಿ ಸ್ಥಳಕ್ಕೆ ಬಂದಿರಲಿಲ್ಲ ಮತ್ತು ಕಾರದಪುಡಿ ಎರೆಚಿ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ಚಾಸಾ *3* ರವರು ಜಗಳ ಬಿಡಿಸಿಲ್ಲ ಮತ್ತು ಸ್ಥಳಕ್ಕೆ ಪೊಲೀಸರು ಬಂದಿರಲಿಲ್ಲ ಎಂದರೆ ಸರಿಯಲ್ಲ. ಸ್ಥಳದಲ್ಲಿ ಯಾವುದೇ ಪಂಚನಾಮೆ ಮಾಡಿಲ್ಲ ಮತ್ತು ನಾನು ಸಹಿ ಮಾಡಿಲ್ಲ ಎಂದರೆ ಸರಿಯಲ್ಲ.

ಆರೋಪಿ ಸ ನಂ *82* ರಲ್ಲಿ ಬೆಳೆದ ಕಾಫಿಯನ್ನು ನಾನು ಕುಯ್ಯುವ ಉದ್ದೇಶದಿಂದ ಈ ಕೇಸನ್ನು ಸೃಷ್ಠಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ ಉಳುಮೆ ಮಾಡುತ್ತಿದ್ದ ಜಮೀನಿನ ಒಳಗೆ ನಾನೇ ಅತಿಕ್ರಮ ಪ್ರವೇಶ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ ದೂರು ನೀಡಿದ್ದರು ಸಹ ಅದನ್ನು ಸ್ವೀಕರಿಸಿರುವುದಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ ಆರೋಪಿ ನನ್ನ ವಿರುದ್ದ ಖಾಸಗಿ ದೂರು ದಾಖಲು ಮಾಡಿರುತ್ತಾರೆಂದರೆ ಗೊತ್ತಿಲ್ಲ. ಆರೋಪಿಗೆ ತೊಂದರೆ ನೀಡುವ ಉದ್ದೇಶದಿಂದ ಸುಳ್ಳು ಪ್ರಕರಣ ಸೃಷ್ಠಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

ಸಹಿ/-

**ಪ್ರಧಾನ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ**
**ಸಕಲೇಶಪುರ**